# ಉಪಕಾರ ಮತ್ತು ಋಣ

ಮನುಷ್ಯ ಸಮುದಾಯ ಜೀವಿ. ಮನುಷ್ಯನೇ ಏಕೆ? ಜೀವಜಗತ್ತಿನಲ್ಲಿ ಸಕಲ ನೂರೆಂಟು ಜೀವ ಸಂಕುಲಗಳು ಕೂಡ ಸಂಘಜೀವಿಗಳೇ ಆಗಿವೆ. ಹುಲಿ ಸಿಂಹಗಳಂತಹ ಮಾಂಸಾಹಾರಿಗಳೂ, ಆನೆ ಜಿರಾಫೆ, ಕಾಡೆಮ್ಮೆ, ಜಿಂಕೆಗಳಂಥ ಸಸ್ಯಾಹಾರಿಗಳೂ, ಪಾರಿವಾಳ ಗುಬ್ಬಿ, ಗಿಳಿ– ಮುಂತಾದ ಪಕ್ಷಿಗಳೂ ಸಂಘಜೀವನವನ್ನು ಇಷ್ಟಪಡುತ್ತವೆ. ಕ್ರಿಮಿಕೀಟಗಳು ಸಾಮ್ರಾಜ್ಯ ಕಟ್ಟಿ ಗುಂಪಿನಲ್ಲೇ ಬದುಕುತ್ತವೆ. ಈ ಗುಂಪು ಜೀವನದಲ್ಲಿ ಸಮಾನ ಜೀವನಾಭಿರುಚಿ ಇರುತ್ತದೆ; ಆಹಾರ ಸಂಸ್ಕೃತಿ ಇರುತ್ತದೆ; ಒಂದೇ ಬಗೆಯ ಜೈವಿಕ ಕ್ರಿಯೆಗಳಿರುತ್ತವೆ. ಸಂಕುಲ ಸಂಕುಲಗಳಲ್ಲಿ ಸಂಕರ ಸಾಧ್ಯವಾಗುವುದಿಲ್ಲ. ಇದರಿಂದಾಗಿಯೇ ಅವು ತಮ್ಮ ಅಸ್ತಿತ್ವದ ಉಳಿವಿಗಾಗಿ ಸಂಘ ಜೀವನವನ್ನು ಮತ್ತಷ್ಟು ಗಟ್ಟಿ ಮಾಡಿಕೊಳ್ಳಲು ಪ್ರಯತ್ನಿಸುತ್ತವೆ. ಜೊತೆಗೆ ಸಂಘ ಜೀವನದಲ್ಲಿ ಇತರ ಸಂಕುಲಗಳಿಂದ ರಕ್ಷಣೆ ದೊರೆಯುತ್ತದೆ. ಜೀವಕ್ಕೆ ಆಪತ್ತು ಬಂದಾಗ ಸಂಘ ಬದುಕು ರಕ್ಷಣೆಗೆ ಬಂದು ಕಾಪಾಡುತ್ತದೆ.



ಮೇಲಿನ ಬದುಕು ಪ್ರವೃತ್ತಿ ಮಟ್ಟದಲ್ಲಿ ನಡೆಯುವಂಥದ್ದು. ಅಂದಮೇಲೆ ಪ್ರವೃತ್ತಿಯಾಚೆಗಿನ ಸಂಸ್ಕೃತಿ ಮತ್ತು ಭಾವ ಪ್ರಪಂಚದಲ್ಲಿ ವ್ಯವಹರಿಸುವ ಮನುಷ್ಯ ಇನ್ನೂ ಹೆಚ್ಚು ಸಂಘ ಜೀವಿಯಾಗಿರುತ್ತಾನೆ. ಅವನು ಕೇವಲ ಭಾವ ಜಗತ್ತಿನಲ್ಲಿ ವಿಹರಿಸುವುದಿಲ್ಲ; ಅವನು ಅಸಾಧಾರಣ ಬುದ್ಧಿಜೀವಿಯೂ ಆಗಿದ್ದಾನೆ. ಅದನ್ನು ಬಳಸಿಕೊಂಡು ಸಂಸ್ಕೃತಿ ನಾಗರಿಕತೆಗಳನ್ನು ಕಟ್ಟಿದ್ದಾನೆ; ಸಾಹಿತ್ಯ ಸಂಗೀತ ಶಿಲ್ಪ– ಮುಂತಾದ ಕಲಾಜಗತ್ತನ್ನೂ ಸೃಷ್ಟಿಸುತ್ತಾನೆ. ಅಷ್ಟೇ ಅಲ್ಲದೆ ಈ 'ಬದುಕಿನಾಚೆಯ ಬದುಕಿ'ನ ಬಗ್ಗೆ, ಗೂಢಗಳ ಬಗ್ಗೆ ಚಿಂತಿಸಿದ್ದಾನೆ. ಪಾಪ ಪುಣ್ಯ– ಸ್ವರ್ಗ ನರಕಗಳ ಬಗ್ಗೆ ಮಾತನಾಡಿದ್ದಾನೆ. ಅದಕ್ಕಿಂತಲೂ ಎತ್ತರದ ಆಧ್ಯಾತ್ಮದ ಬಗ್ಗೆ ತಲೆ ಕೆಡಿಸಿಕೊಂಡಿದ್ದಾನೆ.

ಇಂಥ ನೆಲೆಯಲ್ಲಿಯೇ ಆತನಿಗೆ ಉಪಕಾರ ಸ್ಮರಣೆಯು ಒಂದು ದೊಡ್ಡ ಮೌಲ್ಯವಾಗಿ ಕಂಡಿದೆ. ತನ್ನ ಕಷ್ಟಕಾಲದಲ್ಲಿ ಸಹಾಯ ಮಾಡಿದವರನ್ನು, ಆಪತ್ಕಾಲದಲ್ಲಿ ರಕ್ಷಣೆ ಮಾಡಿದವರನ್ನು ಜಾತಿ, ಕುಲ, ಮತ ವರ್ಗಗಳ ಯಾವ ಗೋಡೆಗಳನ್ನೂ ಲೆಕ್ಕಿಸದೆ ಸ್ಮರಣೆ ಮಾಡುವ, ಹೃದಯದಲ್ಲಿಟ್ಟು ಪೂಜಿಸುವ ಸಾವಿರಾರು ವ್ಯಕ್ತಿಗಳನ್ನು ನಾವು ಕಾಣಬಹುದು. ಹೀಗೆ ಬದುಕಿನ ಸಂಕಷ್ಟ ಸ್ಥಿತಿಯಲ್ಲಿ ನೆರವಾದವರ ಹೆಸರನ್ನು ತಮ್ಮ ಮಕ್ಕಳಿಗಿಟ್ಟು ಸದಾ ಅವರ ಹೆಸರನ್ನು ಕರೆದು ಸ್ಮರಿಸಿಕೊಳ್ಳುವ ಹಲವರನ್ನು ನೋಡಬಹುದು. ಈ ಉಪಕಾರ ಕ್ರಿಯೆಯನ್ನು ನಮ್ಮ ಹಿರಿಯರು 'ಋಣ'ವೆಂದು ಭಾವಿಸಿದ್ದೂ ಉಂಟು; 'ಮಹಾಭಾರತ' ಮಹಾಕಾವ್ಯದಲ್ಲಿ ದ್ರೋಣ, ಭೀಷ್ಮರು ಈ ಋಣ ಭಾರದಲ್ಲಿ ನರಳುತ್ತಾರೆ. 'ಜೋಳದ ಪಾಳಿ'ಯನ್ನು ತೀರಿಸದೆ ನಮಗೆ ಮುಕ್ತಿಯಿಲ್ಲವೆಂದು ಬಗೆದು– ಅದಕ್ಕಾಗಿಯೇ ತಮ್ಮ ಪ್ರಾಣತ್ಯಾಗ ಮಾಡುತ್ತಾರೆ. ಹಾಗೆಯೇ ತಮಗೆ ಉಪಕಾರ ಮಾಡಿದ ಶ್ರೀರಾಮನ ಋಣವನ್ನು ತೀರಿಸಲು ಸುಗ್ರೀವ 'ರಾಮಾಯಣ'ದಲ್ಲಿ ರಾಮನ ಪರವಾಗಿ ಹೋರಾಡುತ್ತಾನೆ. ಇಲ್ಲಿ ಉಪಕಾರ ಸ್ಮರಣೆಯೂ ಋಣದ ರೂಪದಲ್ಲಿ ಕ್ರಿಯಾಶೀಲವಾಗುತ್ತದೆ. ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರ ಮಾಡಬೇಕೆಂಬುದು ಒಂದು ಮೌಲ್ಯವಾಗಿ ಕೆಲಸ ಮಾಡಿರುವುದು ನಮ್ಮ ಸಂಸ್ಕೃತಿಯಲ್ಲಿ ಕಂಡುಬರುತ್ತದೆ. ಆ ಉಪಕಾರವನ್ನು ತೀರಿಸುವುದು ವ್ಯಕ್ತಿಯ ಕರ್ತವ್ಯವೆಂದೂ ಇಲ್ಲದಿದ್ದರೆ ಅದು ಋಣವಾಗಿ ಕಾಡುವುದೆಂದೂ ಅದರಿಂದ ಮುಕ್ತಿ ದೊರೆಯದೆಂದೂ ನಮ್ಮವರು ಭಾವಿಸಿದ್ದರು.

ಉಪಕಾರ ಪಡೆದವರು ಅವರ ಸ್ಮರಣೆ ಮಾಡುವುದು ಹಾಗೂ ಅದನ್ನು ತೀರಿಸುವ ಪ್ರಾಮಾಣಿಕ ಯತ್ನ ಮಾಡುವುದು ಸರಿ. ಅದನ್ನು ಒಂದು ನಾಗರಿಕ ನಡೆಯೆಂದೂ ಮೌಲ್ಯವೆಂದೂ ಬಗೆದರೂ ತಪ್ಪಾಗದು. ಆದರೆ, ಉಪಕಾರ ಮಾಡಿದವರು ತಾವು ಮಾಡಿದ ಉಪಕಾರವನ್ನು ಒಂದು ಶೋಷಣೆಯ ಅಸ್ತ್ರವನ್ನಾಗಿ, ದಬ್ಬಾಳಿಕೆಯ ಮಾರ್ಗವಾಗಿ ಬಳಸಿಕೊಳ್ಳುವ ಸಾಧ್ಯತೆಯೂ ಉಂಟು ಎಂಬುದನ್ನು ಮರೆಯಬಾರದು. ಈ ದೃಷ್ಟಿಯ ಉಪಕಾರವು ಅಂತಃಕರಣದ ಮೂಲಕ ಬಂದುದಾಗಿರುವುದಿಲ್ಲ. ದುರಾಲೋಚನೆಯಿಂದ, ಸ್ವಾರ್ಥದಿಂದ ಮಾಡಿದ ಉಪಕಾರಕ್ಕೆ ಬೆಲೆ ಬರುವುದಿಲ್ಲ. ಉಪಕಾರದ ಹಿಂದೆ ಈ ದೃಷ್ಟಿಯಿದ್ದರೆ ಅದನ್ನು ಗೌರವಿಸಬೇಕಾಗಿಲ್ಲ ಮತ್ತು ಮಾನ್ಯ ಮಾಡಬೇಕಿಲ್ಲ.

■ ಶಿಕಾಕು

# ಮಾತೇ ಮುತ್ತು

★ ಈಗ ನಾವು ಯಾವುದನ್ನು ವಿಜ್ಞಾನ ಎನ್ನುವೆವೋ ಅಂತಹ ಜ್ಞಾನ ಸಾವಿರಾರು ವರ್ಷ ಗಳಿಂದ ಸ್ವಾತಂತ್ರ್ಯವನ್ನು ಗಳಿಸುವುದಕ್ಕೆ ನಾವು ಮಾಡುತ್ತಿರುವ ಯತ್ನ.

–ಸ್ವಾಮಿ ವಿವೇಕಾನಂದ

★ ಮನುಷ್ಯರು ಅದ್ಭುತವಾದುದನ್ನು ಪ್ರೀತಿಸುತ್ತಾರೆ; ಅದೇ ವಿಜ್ಞಾನದ ಬೀಜ.

–ಎಮರ್‌ಸನ್

★ ನಿಜವಾದ ವಿದ್ಯೆ ಮನುಷ್ಯನಿಗೆ ಆಲೋಚಿಸುವುದನ್ನು ಕಲಿಸುತ್ತದೆ. ಆಲೋಚಿಸತೊಡಗಿದಾಗ ಸಮಾನತೆ, ಸರ್ವೋದಯದ ದಿಗಂತಗಳು ತೆರೆಯುತ್ತವೆ.

–ಹಾ.ಮಾ.ನಾಯಕ

★ ನಿನಗಿರಬಹುದಾದ ಶತ್ರುಗಳಲ್ಲಿ ಅತಿ ಭಯಂಕರನು ನೀನೇ.

–ಝುರತುಷ್ಟ್ರ

★ ವಿವೇಕ ಇಲ್ಲದವರ ಅಧಃಪತನ ನೂರು ರೀತಿಯಲ್ಲಾಗುತ್ತದೆ.

–ಭರ್ತೃಹರಿ

★ ವಿದ್ಯಾವಂತ ಮೂಢನಂಬಿಕಸ್ತ ಅವಿದ್ಯಾವಂತ ಮೂಢನಂಬಿಕಸ್ತನಿಗಿಂತ ಹೆಚ್ಚು ಅಪಾಯಕಾರಿ.

–ಎಚ್.ನರಸಿಂಹಯ್ಯ

★ ನನಗೆ ಎಷ್ಟೊಂದು ತಿಳಿದಿದೆ ಎಂದು 'ಜ್ಞಾನ'ಕ್ಕೆ ಹೆಮ್ಮೆ. ಆದರೆ ನನಗಿನ್ನೇನೂ ತಿಳಿಯದೇ ಎಂದು 'ವಿವೇಕ' ದೀನವಾಗಿರುತ್ತದೆ.

–ವಿಲಿಯಂ ಕೌಪರ್

★ ಧರ್ಮ ಇರುವುದು ಆತ್ಮಗಳ ಉಳಿವಿಗಾಗಿ ಅಲ್ಲ; ಮಾನವನ ಕಲ್ಯಾಣಕ್ಕಾಗಿ, ಸಮಾಜದ ಸಂರಕ್ಷಣೆಗಾಗಿ.

–ಬಿ.ಆರ್.ಅಂಬೇಡ್ಕರ್

★ ವೈರಾಗ್ಯಕ್ಕೆ ಸಮನಾದ ಸಂಪತ್ತು ಈ ಲೋಕದಲ್ಲಿಯೂ ಇಲ್ಲ; ಸ್ವರ್ಗದಲ್ಲಿಯೂ ಇಲ್ಲ.

–ತಿರುವಳ್ಳುವರ್

★ ಯಾರಿಗೆ ಒಬ್ಬ ಶತ್ರುವೂ ಇರುವುದಿಲ್ಲವೋ, ಅಂಥವನಿಗೆ ಒಬ್ಬ ಮಿತ್ರನೂ ಇರುವುದಿಲ್ಲ.

–ಟೆನಿಸನ್

★ ನಮ್ಮ ಶಕ್ತಿಯಲ್ಲಿ ನಂಬಿಕೆ ಇರಬೇಕು, ಆದರೆ ಹೆಮ್ಮೆ ಇರಬಾರದು. ಹಾಗೆಯೇ ಇತರರ ಶಕ್ತಿಯನ್ನೂ ಗೌರವಿಸಬೇಕು, ಆದರೆ ಅದಕ್ಕೆ ಭಯ ಪಡಬಾರದು.

–ಥಾಮಸ್ ಜೆಫರ್‌ಸನ್

★ ಸ್ನೇಹಿತರು ಹತ್ತಿರ ಇರಲಿ, ಶತ್ರುಗಳು ಇನ್ನೂ ಹತ್ತಿರ ಇರಲಿ!

–ಸಿಸಿಲಿ ಗಾದೆ

★ ಹೊಟ್ಟೆಗೆ ಅನ್ನ ಬೇಕು ಎಂಬ ವಿಚಾರದ ಉತ್ಸಾಹದಲ್ಲಿ, ಮನಸ್ಸಿಗೆ ಶಾಂತಿ ಬೇಕು ಎನ್ನುವುದನ್ನು ಅಲ್ಲಗಳೆಯಬಾರದು.

–ಕುವೆಂಪು

★ ಯುದ್ಧವೇ ಪಾಪದ ತವರುಮನೆ.

–ತರಾಸು

★ ಮಿತಿ ಮೀರಿದ ಶೇಖರಣೆಯಿಂದ ಶ್ರೀಮಂತರಾಗುವುದು ಹೇಗೆ ಹಿತವಲ್ಲವೋ, ಹಾಗೆ ಮಿತಿ ಮೀರಿದ ಮಿತವ್ಯಯದಿಂದ ಶ್ರೀಮಂತರಾಗುವುದೂ ಒಳ್ಳೆಯದಲ್ಲ.

–ಎಡ್ಮಂಡ್ ಬರ್ಕ್